# ಭಾರತದ ಲೈಂಗಿಕ ಅಲ್ಪಸಂಖ್ಯಾತರಿಗಾಗಿ ರಾಜಕೀಯ ನಾಯಕತ್ವ ಅಕಾಡೆಮಿ

# ಅಭ್ಯರ್ಥಿಗಳಿಗಾಗಿ ಕರೆ

*ಬೆಂಗಳೂರು – ಭಾರತ, ಜನವರಿ – ಸೆಪ್ಟೆಂಬರ್ ೨೦೧೭*

## 1. ಪರಿಚಯ ಮತ್ತು ಉದ್ದೇಶಗಳು

ಸಾಲಿಡಾರಿಟಿ ಫೌಂಡೇಷನ್ (ಸಾಲಿಡಾರಿಟಿ) ಹಾಗೂ ಗೇ ಮತ್ತು ಲೆಸ್ಬಿಯನ್ ವಿಕ್ಟರಿ ಇನ್ಸ್ಟಿಟ್ಯೂಟ್ (ವಿಕ್ಟರಿ) ಸಂಸ್ಥೆಗಳು ಸಹಯೋಗದಲ್ಲಿ ನಡೆಯುತ್ತಿರುವ ರಾಜಕೀಯ ನಾಯಕತ್ವ ತರಬೇತಿ ಅಕಾಡೆಮಿಯಲ್ಲಿ ಭಾಗವಹಿಸಲು ಕರ್ನಾಟಕ, ಆಂದ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿನ ಎಲ್ ಜಿ ಬಿ ಟಿ ಕ್ಯು ಐ (LGBTQI) ಅಭ್ಯರ್ಥಿಗಳಿಗಾಗಿ ಕರೆ ನೀಡಿದೆ. ತರಬೇತಿಯು ಪ್ರಸಕ್ತ ಸಾಲಿನ, ಅಂದರೆ ೨೦೧೭ರ ಜನವರಿಯಿಂದ ಸೆಪ್ಟೆಂಬರ್ ವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ. ತರಬೇತಿಯು ನಾಲ್ಕು ಅವಧಿಗಳಲ್ಲಿ ನಡೆಯುತ್ತದೆ.

ಆಸಕ್ತರು ಅರ್ಜಿಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22nd January 2017.

**ಈ ರಾಜಕೀಯ ನಾಯಕತ್ವದ ತರಬೇತಿ ಕಾರ್ಯಕ್ರಮದ ಮುಖ್ಯ ಉದ್ದೇಶ :**

ಸಮುದಾಯದ ಭಾವೀ ನಾಯಕರನ್ನು ಮತ್ತು ಬೆಂಗಲಿಗರನ್ನು ರೂಪಿಸಲು ನಿಷ್ಪಕ್ಷಪಾತವಾಗಿ ಸರ್ವತೋಮುಖ ತರಬೇತಿಯನ್ನು ಅಕಾಡೆಮಿ ನೀಡಲಿದೆ. ಲೈಂಗಿಕ ಅಲ್ಪಸಂಖ್ಯಾತರು/ಎಲ್ ಜಿ ಬಿ ಟಿ ಕ್ಯು ಐ (LGBTQI) ಸಮುದಾಯವು ಈ ನೆಲದ ಪ್ರಜಾತಾಂತ್ರಿಕತೆ, ಸಾಮಾಜಿಕ ಮಾತು ರಾಜಕೀಯ ವ್ಯವಸ್ಥೆಗಳನ್ನು ಅರ್ಥೈಸಿಕೊಂಡು ಸಾರ್ವಜನಿಕ ವಲಯಗಳಲ್ಲಿ ತಮ್ಮ ಸ್ಥಾನವನ್ನು ಗಳಿಸಿ ಸಮಾನತೆಯಡೆಗೆ ಸಾಗಬೇಕೆಂಬುದು ರಾಜಕೀಯ ನಾಯಕತ್ವ ಅಕಾಡೆಮಿಯ ಉದ್ದೇಶಗಳಲ್ಲೊಂದಾಗಿದೆ.

ತರಬೇತಿಯು ಮೂರು ದಿನಗಳ ನಾಲ್ಕು ಘೋಷ್ಠಿಗಳನ್ನು ನಡೆಸಲಿದೆ. ಅವುಗಳಲ್ಲಿ ಸಿದ್ಧಾಂತಗಳು, ಗುಂಪು ಚಟುವಟಿಕೆ ಮತ್ತು ಕಮ್ಮಟ/ಕಾರ್ಯಾಗಾರಗಳಿರುತ್ತವೆ. ಇವುಗಳಿಂದ ಶಿಭಿರಾರ್ಥಿಗಳು ತಮ್ಮ ಸಮುದಾಯದ ಏಳಿಗೆಗಾಗಿ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಲು ಅಗತ್ಯ ಕುಶಲತೆಗಳು ಮತ್ತು ತಂತ್ರಗಾರಿಕೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅನುವಾಗುತ್ತದೆ. ತರಬೇತಿಗಳು, ಕನ್ನಡ ಮತ್ತು ತೆಲುಗಿನಲ್ಲಿ ಅಥವಾ ಆಂಗ್ಲಭಾಷೆಯಲ್ಲಿ ನಡೆಯಲಿವೆ. ಅಗತ್ಯ ಕಂಡುಬಂದಲ್ಲಿ ಭಾಷಾನುವಾದ ಒದಗಿಸಲಾಗುತ್ತದೆ.

ಸಾಲಿಡಾರಿಟಿ ಫೌಂಡೇಷನ್ ಭಾರತದಲ್ಲಿನ ಒಂದು ಸಂಸ್ಥೆಯಾಗಿದ್ದು, ಲೈಂಗಿಕ ಕಾರ್ಮಿಕರು ಹಾಗೂ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಫೆಲೋಷಿಪ್ ಮತ್ತು ಗ್ರ್ಯಾಂಟ್ ಗಳನ್ನು ನೀಡುತ್ತದೆ. ಇದು

ಸಂಪನ್ಮೂಲಗಳು, ಜ್ಞಾನ ಮತ್ತು ವಿಚಾರಗಳ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಿದೆ ಹಾಗೂ ಸಾಮಾಜಿಕ ಬದಲಾವಣೆಗಾಗಿ ಮುಂಚೂಣಿಯಲ್ಲಿದ್ದುಕೊಂಡು ಕೆಲಸ ಮಾಡುತ್ತಿದೆ.

ಗೇ ಮತ್ತು ಲೆಸ್ಬಿಯನ್ ವಿಕ್ಟರಿ ಇನ್ಸ್ಟಿಟ್ಯೂಟ್ (ವಿಕ್ಟರಿ) ಯು ಒಂದು ಅಮೆರಿಕಾದ ಸಂಸ್ಥೆಯಾಗಿದ್ದು, ಇದು ಲೈಂಗಿಕ ಅಲ್ಪಸಂಖ್ಯಾತರಾದ ಗೇ, ಲೆಸ್ಬಿಯನ್, ದ್ವಿಲಿಂಗ ಕಾಮಿಗಳು ಮತ್ತು ಲಿಂಗತ್ವ ಅಲ್ಪಸಂಖ್ಯಾತರನ್ನು ಸಾರ್ವಜನಿಕ ಉದ್ಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಮತ್ತು ಯಶಸ್ವಿಯಾಗಲು ಬೆಂಬಲ ನೀಡುತ್ತದೆ.

## 2. ಭಾರತದಲ್ಲಿ ಎಲ್ ಜಿ ಬಿ ಟಿ ಕ್ಯು ಐ ಗಳ ರಾಜಕೀಯ ನಾಯಕತ್ವ ಅಕಾಡೆಮಿಯ ಅಗತ್ಯವಿದೆಯೇ?

ಲೈಂಗಿಕತೆ, ಜೆಂಡರ್ ಅಸ್ಮಿತೆ ಹಾಗೂ ಅಭಿವ್ಯಕ್ತಿ ವಿಷಯಗಳು ಇಂದಿಗೂ ಸಮಾಜದಲ್ಲಿ ಬಹಿಷ್ಕೃತ ಸ್ಥಿತಿಯಲ್ಲಿದೆ. ಅಷ್ಟೇ ಏಕೆ, ಭಾರತದ ಪ್ರಜಾಪ್ರಭುತ್ವ ಸಂಸ್ಥೆಗಳು ಬಹಿರಂಗವಾಗಿಯೇ ಲೈಂಗಿಕ ಅಲ್ಪಸಂಖ್ಯಾತರ ಬಗೆಗಿನ ಸಮಾನತೆಯನ್ನು ತಿರಸ್ಕರಿ/ವಿರೋಧಿಸುತ್ತಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನು ತಗ್ಗಿಸಿ ಸಮಾನತೆಯನ್ನು ಸ್ಥಾಪಿಸಲು ಈ ಸಮುದಾಯವನ್ನು ಸಶಕ್ತರನ್ನಾಗಿಸುವುದು ಇಂದಿನ ಅಗತ್ಯವಾಗಿದೆ. ಇವರು ತಮ್ಮ ಸಮುದಾಯದ ಧ್ವನಿಯನ್ನು ಪ್ರಜಾಪ್ರಭುತ್ವದ ಮಧ್ಯಭಾಗಕ್ಕೆ ತರಲು ಮತ್ತು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸಾರ್ವಜನಿಕ ಅಧಿಕಾರದ ಸ್ಥಾನಗಳನ್ನು ಏರುವುದು ತೀರಾ ಅವಶ್ಯಕವಾಗಿರುವುದರಿಂದ ಇವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿ ಆ ನಿಟ್ಟಿನಲ್ಲಿ ನಡೆಸಬೇಕಾಗಿದೆ.

ಸಮುದಾಯದ ಜನಗಳ ನಾಯಕತ್ವದ ತಂತ್ರಗಾರಿಕೆಯನ್ನು ಅಭಿವೃದ್ಧಿಪಡಿಸುವುದರಿಂದ ದೇಶದ ರಾಜಕೀಯ ವಲಯದಲ್ಲಿ ಉತ್ತಮವಾದ ಚರ್ಚೆಗಳಿಗೆ ಅವಕಾಶವುಂಟಾಗುತ್ತದೆ. ರಾಜಕೀಯವಾಗಿ ಬೆಳೆದ ಸಮುದಾಯದ ನಾಯಕರುಗಳು ದೇಶದಲ್ಲಿ ಈ ಸಮುದಾಯದ ಜನರು ಸಮಾಜದಲ್ಲಿ ಮತ್ತು ಸಾಂಸ್ಥಿಕ ವಲಯ/ ಘಟಕಗಳಲ್ಲಿ ಅನುಭವಿಸುತ್ತಿರುವ ದೌರ್ಜನ್ಯಗಳ ಬಗ್ಗೆ ಇಡೀ ದೇಶದ ಗಮನವನ್ನು ಸೆಳೆಯಬಲ್ಲರು. ಲೈಂಗಿಕ ಅಲ್ಪಸಂಖ್ಯಾತರು/ಎಲ್ ಜಿ ಬಿ ಟಿ ಕ್ಯು ಐ (LGBTQI) ಸಮುದಾಯವು ರಾಜಕೀಯ ಜ್ಞಾನವನ್ನು ಪಡೆದು ಮುಂದುವರಿಯುವುದರಿಂದ ದ್ವಿಮುಖರೀತಿಯ ಅರಿವನ್ನು ನಮ್ಮ ದೇಶದಲ್ಲಿ ತರಬಲ್ಲರು; ಒಂದು- ಸಾರ್ವಜನಿಕ ಸಂಸ್ಥೆಗಳಲ್ಲಿನ ಅಧಿಕಾರಿಗಳ ಸಮಕ್ಷಮದಲ್ಲಿ ಈ ಸಮುದಾಯದ ವಾಸ್ತವಿಕತೆಯ ಅರಿವು ಮೂಡಿಸುವುದರ ಜೊತೆಗೆ ಎರಡು- ಸಮುದಾಯದ ಇತರ ಜನರಿಗೆ ಈ ನಾಯಕರುಗಳು ಒಳ್ಳೆಯ ಮಾದರಿಯಾಗಿ ನಿಲ್ಲಬಲ್ಲರು.

## 3. ಉದ್ದೇಶಿತ ಜನ-ಸಮುದಾಯ ಮತ್ತು ಅಭ್ಯರ್ಥಿಗಳನ್ನು ಆರಿಸುವ ಪ್ರಕ್ರಿಯೆ

ಸಾಲಿಡಾರಿಟಿ ಹಾಗೂ ವಿಕ್ಟರಿ ಸಂಸ್ಥೆಗಳು, ಲೈಂಗಿಕ ಅಲ್ಪಸಂಖ್ಯಾತರು/ಎಲ್ ಜಿ ಬಿ ಟಿ ಕ್ಯು ಐ (LGBTQI) ಸಮುದಾಯದ ೧೮ ವರ್ಷ ಮೇಲ್ಪಟ್ಟ ಕರ್ನಾಟಕ, ಆಂದ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿನ ೩೦ ಅಭ್ಯರ್ಥಿಗಳನ್ನು ಆರಿಸಿಕೊಳ್ಳಲಿದೆ. ಈ ಕೆಳಗಿನ ಅರ್ಹತೆಗಳನ್ನು ಬಯಸುತ್ತದೆ;

- ಲೈಂಗಿಕ ಅಲ್ಪಸಂಖ್ಯಾತರು/ಎಲ್ ಜಿ ಬಿ ಟಿ ಕ್ಯು ಐ (LGBTQI) ಸಮುದಾಯದ ಸದಸ್ಯರು
- ಪ್ರಜಾಪ್ರಭುತ್ವ ವಲಯಗಳಲ್ಲಿ ನಂಬಿಕೆಯಿಟ್ಟು ಬದ್ಧತೆಯಿಂದ ತೊಡಗಿಸಿಕೊಳ್ಳುವ ಆಸಕ್ತಿಯಿರುವವರು

- ರಾಜಕಾರಣದಲ್ಲಿ ಮತ್ತು ರಾಜಕೀಯ ಪಕ್ಷಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರು/ಎಲ್ ಜಿ ಬಿ ಟಿ ಕ್ಯು ಐ (LGBTQI) ಸಮುದಾಯದ ಹಾಗೂ ಕಡಿಮೆ ಪ್ರಾತಿನಿಧ್ಯತೆ ಹೊಂದಿರುವ ಇತರ ಸಮುದಾಯದ ಸಮಾನತೆಗಾಗಿ ಕಟಿಬದ್ಧವಾಗಿ ನಿಲ್ಲುವ ವಿಚಾರ ಹೊಂದಿರುವವರು.
- ಅಕಾಡೆಮಿಯು ನಡೆಸುವ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಬದ್ಧತೆ ಹೊಂದಿರಬೇಕು.
- ಒಳ್ಳೆಯ ಸಂವಹನ ಕಲೆ, ಕಲಿಯುವ ಆಸಕ್ತಿ/ಬಯಕೆ, ವೈವಿಧ್ಯತೆಯನ್ನು ಗೌರವಿಸುವ ಮನೋಭಾವ ಮತ್ತು ವಿಚಾರದ ಬಗ್ಗೆ ಗಂಭೀರತೆಯುಳ್ಳವರಿಗೆ ಆದ್ಯತೆ.

ಈ ಸಹಭಾಗೀ ಸಂಸ್ಥೆಗಳು ವೈವಿಧ್ಯತೆ/ಅನೇಕತೆಯಲ್ಲಿ ಬದ್ಧತೆಯುಳ್ಳವಾಗಿವೆ. ಈ ಸಂಸ್ಥೆಗಳು ಲೈಂಗಿಕ ಅಲ್ಪಸಂಖ್ಯಾತರು/ಎಲ್ ಜಿ ಬಿ ಟಿ ಕ್ಯು ಐ (LGBTQI) ಸಮುದಾಯದಲ್ಲಿಯೇ ಕಡಿಮೆ ಪ್ರಾತಿನಿಧ್ಯತೆ ಹೊಂದಿರುವ ಸಮುದಾಯಗಳ ಅಂದರೆ; ಲೆಸ್ಬಿಯನ್, ಬೈಸೆಕ್ಶ್ಯುಯಲ್ ಮಹಿಳೆಯರು, ಟ್ರ್ಯಾನ್ಸ್ ಜೆಂಡರ್ ಜನರು, ಅಂತರ್ಲಿಂಗಿ (intersex) ಜನರು ಮತ್ತು ಜನಾಂಗೀಯ, ಭಾಷಾ, ಧಾರ್ಮಿಕ ಅಲ್ಪಸಂಖ್ಯಾತರು, ದಲಿತರು, ಎಚ್ ಐ ವಿ ಸೋಂಕಿತ ಜನರು, ಅಂಗವಿಕಲರ ರನ್ನು ಈ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ/ಆದ್ಯತೆ ನೀಡುತ್ತದೆ.

**<u>ಆಯ್ಕೆಯ ಪ್ರಕ್ರಿಯೆ:</u>**

- ಸಾಲಿಡಾರಿಟಿ ಮತ್ತು ವಿಕ್ಟರಿ ಸಂಸ್ಥೆಯ ಸಿಬ್ಬಂದಿಗಳು ಸ್ಥಳೀಯ ವಿಷಯ ತಜ್ಞರು ಹಾಗೂ ಸಹಭಾಗೀ ಸಂಸ್ಥೆಗಳೊಡಗೂಡಿ ಅಭ್ಯರ್ಥಿಯ ಆಯ್ಕೆಯನ್ನು ನಡೆಸುತ್ತಾರೆ,
- ಆಯ್ಕೆಯ ಪ್ರಕ್ರಿಯೆಯು ಎರಡು ಹಂತಗಳಿಂದ ಕೂಡಿದೆ; ಮೊದಲನೆ ಹಂತದಲ್ಲಿ ಲಿಖಿತ ಅರ್ಜಿಗಳ ಮಾದರಿ ಮತ್ತೊಂದು ಹಂತದಲ್ಲಿ, ಪರಿಶೀಲಿಸಿ ಆರಿಸಿದ ಅರ್ಜಿಗಳ ಅಭ್ಯರ್ಥಿಗಳನ್ನು ಮೌಕಿಕವಾಗಿ ಸಂದರ್ಶಿಸಲಾಗುವುದು./ ಅಭ್ಯರ್ಥಿಗಳ ವೈಯಕ್ತಿಕ ಸಂದರ್ಶನ ನಡೆಸಲಾಗುವುದು
- ಶಿಭಿರಾರ್ಥಿಗಳಲ್ಲಿ ವೈವಿಧ್ಯತೆಯನ್ನು ಕಾಪಾಡಿಕೊಳ್ಳಲು ಭೌಗೋಳಿಕ, ಲಿಂಗತ್ವ/ ಜೆಂಡರ್, ವಯಸ್ಸು/ ವಯೋಮಾನ ಹಾಗೂ ಇನ್ನಿತರ ವೈಯಕ್ತಿಕ ಮತ್ತು ಸಾಮಾಜಿಕ ವಿಶೇಶಣ/ ಗುಣಲಕ್ಷಣಗಳನ್ನು ಪರಿಗಣನೆಯಲ್ಲಿಟ್ಟುಕೊಳ್ಳಲಾಗುವುದು.

## 4. ಅರ್ಜಿ, ಕೊನೆಯ ದಿನಾಂಕ ಮತ್ತು ವಿದ್ಯಾರ್ಥಿ/ಶಿಶ್ಯವೇತನಗಳು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 22nd Jan 2017 ಅಥವಾ ಆಯ್ಕೆಯು ಸಂಪೂರ್ಣಗೊಳ್ಳುವವರೆಗೆ.

ಅರ್ಜಿಗಳನ್ನು ಕನ್ನಡ, ತೆಲುಗು / ಮತ್ತು ಆಂಗ್ಲಭಾಷೆಗಳಲ್ಲಿ ಮಾತ್ರವೇ ಬರೆಯಬೇಕು.
ಆಯ್ಕೆಯಾದ ಅಭ್ಯರ್ಥಿಗಳಿಗೆ ಸಾಲಿಡಾರಿಟಿ ಮತ್ತು ವಿಕ್ಟರಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ವಿದ್ಯಾರ್ಥಿ/ಶಿಶ್ಯವೇತನಗಳೊಂದಿಗೆ

- ತರಬೇತಿ
- ಸಾಮಗ್ರಿಗಳು

- ಪ್ರಯಾಣ ವೆಚ್ಚ (ಬೆಂಗಳೂರಿನವರಲ್ಲದವರಿಗೆ ಮಾತ್ರ)
- ಊಟ ಮತ್ತು
- ವಸತಿ

ಸೌಲಭ್ಯಗಳನ್ನು ನೀಡಲಾಗುವುದು.

## 5. ಮಾಹಿತಿ

ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ;
ವಿಳಾಸ:- solidarityfoundation2013@gmail.com

## 6. ಪಠ್ಯಕ್ರಮ ಮತ್ತು ವಿಧಾನ

ಈ ತರಬೇತಿಗಳು ತರಗತಿಯ ಬೋಧನೆ ಮತ್ತು ವಯಸ್ಕ ಕಲಿಕಾ ಆಧಾರಿತವಾಗಿದ್ದು ಪಾಲ್ಗೊಳ್ಳುವಿಕೆಯ ವಿಧಾನದ ಕಾರ್ಯತಂತ್ರಗಳೊಂದಿಗೆ ಪರಸ್ಪರ ಘಟಕಗಳ (ಮಾಡ್ಯೂಲ್) ಮಿಶ್ರಣದ ಮುಖಾಂತರ ನಡೆಸಲಾಗುವುದು ಮತ್ತು ಭಾಗವಹಿಸುವವರ ವೀಕ್ಷಣೆ ಮತ್ತು ಬೆಂಬಲವನ್ನು ನಂತರ ನೀಡಲಾಗುವುದು. ಪ್ರತಿಯೊಂದು ಅವಧಿಯಲ್ಲಿ ಕೇಂದ್ರೀಕೃತ ವಿಷಯವನ್ನು ಹೊಂದಿದ್ದು ಭಾರತೀಯ ಸಂಪನ್ಮೂಲ ವ್ಯಕ್ತಿಗಳು ತರಬೇತುದಾರರಾಗಿ ಈ ತರಬೇತಿಯನ್ನು ನಡೆಸಿಕೊಡುತ್ತಾರೆ. ಕೆಲವು ಅವಧಿಗಳಲ್ಲಿ ಸಲಹಾ ತಂಡದ ಪರಿಣಿತರಿಗೆ ಪೂರಕವಾಗಿ ಇತರ ತಜ್ಞರ ಮದ್ಯಸ್ಥಿಕೆ ಇರುತ್ತದೆ. ಅಕಾಡೆಮಿಗೆ ಹಾಜರಾಗುವ ಅಭ್ಯರ್ಥಿಗಳಲ್ಲಿ ತಂಡವಾಗಿ ವಿಂಗಡಿಸಿ ಪ್ರತೀ ರಾತ್ರಿ ಕೊಟ್ಟಿರುವ ಕಾರ್ಯಗಳನ್ನು ಪೂರ್ಣಗೊಳಿಸುತ್ತಾರೆ.

**ಮಾಡ್ಯೂಲ್ 1 – ಎಲ್.ಜಿ.ಬಿ.ಟಿ.ಐ.ಕ್ಯೂ ನಾಯಕರು ಹಾಗೆಯೇ ಬದಲಾವಣೆಯ ತಯಾರಕರು**

- ದಿನಾಂಕಗಳು: 10, 11, 12 ಮಾರ್ಚ್ 2017
- ಉದ್ದೇಶಗಳು: ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಮತ್ತು ಭಾರತದ ಎಲ್‌ಜಿಬಿಟಿಐಕ್ಯೂ ಸಮುದಾಯದವರ ಅವಶ್ಯಕತೆಗಳ ಬಗ್ಗೆ ಆಳವಾದ ಅಡ್ಡಹಾಯುವ ಮಾಹಿತಿಯನ್ನು ಪಡೆಯಲು ಇಚ್ಚಿಸುವ ಎಲ್‌ಜಿಬಿಟಿಐ ನಾಯಕರುಗಳ ಆತ್ಮ-ವಿಶ್ವಾಸವನ್ನು ಬಲಪಡಿಸುವುದಾಗಿದೆ.
- ಅವಧಿಗಳು:
    - ಎ. ಎಲ್‌ಜಿಬಿಟಿಐ ರಾಜಕೀಯ ನಾಯಕತ್ವ

      ವಿಷಯಗಳು:
        - ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕಾರಣಗಳು ಮತ್ತು ಎಲ್‌ಜಿಬಿಟಿಐಕ್ಯೂ ನಾಯಕರೆಂದು (ಮಹಿಳಾ ಮತ್ತು ದಲಿತರ ಗುಂಪುಗಳಿಂದ ಆದ ಕಲಿಕೆಗಳನ್ನು ಒಳಗೊಂಡಂತೆ) ಬಹಿರಂಗವಾಗಿ ಹೊರಬರಲು ಎದುರಾಗುವ ಅಡೆತಡೆಗಳನ್ನು ನಿವಾರಿಸುವುದು

- ಅಡ್ಡಛೇದಿಸುವ ಅನನ್ಯತೆಗಳನ್ನು ನಿರ್ವಹಿಸುವುದು: ಎಲ್‌ಜಿಬಿಟಿಐ ಸಮುದಾಯವನ್ನು ಮತ್ತು ಇಡೀ ಸಮುದಾಯವನ್ನು ಪ್ರತಿನಿಧಿಸುವುದು
- ಅನುಭವ ಹಂಚಿಕೆ: ಯಶಸ್ವೀ ಎಲ್‌ಜಿಬಿಟಿಐಕ್ಯೂ ರಾಜಕೀಯ ನಾಯಕರುಗಳು
- ಎಲ್‌ಜಿಬಿಟಿಐಕ್ಯೂ ರಾಜಕೀಯ ನಾಯಕರಾಗಿ ರಾಜಕೀಯ ಪಕ್ಷಗಳನ್ನು ಮುನ್ನಡೆಸುವುದರ ಬಗ್ಗೆ ಕಲಿಕೆ

- ಬಿ. ಭಾರತದ ಎಲ್‌ಜಿಬಿಟಿಐಕ್ಯೂ ಸಮುದಾಯದ ಅವಶ್ಯಕತೆಗಳನ್ನು ಅರಿತುಕೊಳ್ಳುವುದು

ವಿಷಯಗಳು:

- ಎಲ್‌ಜಿಬಿಟಿಐಕ್ಯೂ ಕುಟುಂಬದ ಒಳಗಿನ ಪ್ರತಿಯೊಂದು ಸಮುದಾಯದ ಗುಂಪಿನ ಅವಶ್ಯಕತೆಗಳ ಬಗ್ಗೆ ಕಲಿಕೆ
- ಭಾರತದ ಎಲ್‌ಜಿಬಿಟಿಐಕ್ಯೂ ಸಮುದಾಯದ ಮೇಲೆ ಪರಿಣಾಮ ಬೀರುವ ಕಾನೂನುಗಳು ಮತ್ತು ನೀತಿಗಳು
- ಜಾತಿ, ಲಿಂಗ, ವರ್ಗ ಮತ್ತು ಎಲ್‌ಜಿಬಿಟಿಐಕ್ಯೂ: ತಾರತಮ್ಯದ ಭೇದಗಳು
- ಗೆಲ್ಲುವ ಮೈತ್ರಿಗಳು' ಮನಸ್ಸುಗಳು: ಮಾಹಿತಿಯನ್ನು ಬಳಸುವ ಮುಖಾಂತರ ಸಮಾನತೆಗಾಗಿನ ಚರ್ಚೆಗೆ ಬಲವಾದ ಆಧಾರವನ್ನು ಒದಗಿಸುವುದು
- ಗೆಲ್ಲುವ ಮೈತ್ರಿಗಳು' ಹೃದಯಗಳು: ಮೌಲ್ಯಾಧಾರಿತ ಭಾಷೆಯನ್ನು ಬಳಸುವುದು

**ಮಾಡ್ಯೂಲ್ 2 - ಭಾರತೀಯ ರಾಜಕೀಯ ವ್ಯವಸ್ಥೆ ಮತ್ತು ಮಾನವ ಹಕ್ಕುಗಳ ಕಾರ್ಯವಿಧಾನ**

- ದಿನಾಂಕ: 5,6,7 ಮೇ 2017
- ಉದ್ದೇಶಗಳು: ಭಾರತದಲ್ಲಿ ಮಾನವ ಹಕ್ಕುಗಳನ್ನು ರಕ್ಷಿಸಲು ರಾಜಕೀಯ ವ್ಯವಸ್ಥೆ ಮತ್ತು ವಿಧಾನಗಳನ್ನು ಅರ್ಥೈಸಿಕೊಳ್ಳುವುದು ಮತ್ತು ಸಮಾನತೆಯನ್ನು ಮುನ್ನಡೆಸಲು ಅವುಗಳನ್ನು ಬಳಸಿಕೊಳ್ಳುವುದು.
- ಅವಧಿಗಳು:

- ಎ. ಭಾರತದಲ್ಲಿ ರಾಜಕೀಯ ವ್ಯವಸ್ಥೆ

ವಿಷಯಗಳು:

- ಪ್ರಜಾಪ್ರಭುತ್ವದ ಪರಿಚಯ
- ಪರಿಣಾಮಕಾರಿ ಪ್ರಜಾಪ್ರಭುತ್ವಕ್ಕೆ ಇರಬೇಕಾದ ಪ್ರಮುಖ ಅಂಶಗಳು
- ಭಾರತದ ರಾಜಕೀಯ ರಚನೆಗಳು ಮತ್ತು ಚುನಾವಣಾ ಪದ್ದತಿಗಳು
- ಸ್ಥಳೀಯ ಮಟ್ಟದ ಸರ್ಕಾರಗಳು: ರಚನೆ, ಕಾರ್ಯ ನಿರ್ವಹಣೆ ಭಾಗವಹಿಸಿ ಮತ್ತು ಕಚೇರಿ ನಡೆಸಲು ಅವಕಾಶಗಳು

- ಸಾರ್ವಜನಿಕ ನೀರಿಗಳನ್ನು ಅಭಿವೃದ್ಧಿಪಡಿಸುವುದು
- ಭಾರತದ ರಾಜಕೀಯ ವ್ಯವಸ್ಥೆಯ ಮುಖಾಂತರ ನಾಗರಿಕ ಹಕ್ಕುಗಳ ಪ್ರಗತಿಯ ಉದಾಹರಣೆಗಳು
- ರಾಜಕೀಯ ಪಕ್ಷಗಳು: ಯಾವ ರೀತಿ ಭೇದಿಸುವುದು

- ಬಿ. ಮಾನವ ಹಕ್ಕುಗಳ ರಕ್ಷಣೆಯ ಕಾರ್ಯವಿಧಾನಗಳು

ವಿಷಯಗಳು:

- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಚೌಕಟ್ಟು
- ಎಲ್‌ಜಿಬಿಟಿಐಕ್ಯೂ ಸಮುದಾಯದವರ ಸಮಾನತೆಯನ್ನು ಪ್ರೋತ್ಸಾಹಿಸಲು ಮತ್ತು ಮುನ್ನಡೆಸಲು ಪ್ರಸ್ತುತ ಇರುವ ಕಾನೂನು ಮತ್ತು ಸ್ಥಾಂಸ್ಥಿಕ ಚೌಕಟ್ಟುಗಳು
- ಮಾನವ ಹಕ್ಕುಗಳ ಚೌಕಟ್ಟಿನಲ್ಲಿ ಎಲ್‌ಜಿಬಿಟಿಐಕ್ಯೂ ಹಕ್ಕುಗಳು
- ಮಾಡ್ಯೂಲ್ 3 - ವಕಾಲತ್ತು, ಸಂವಹನ ಮತ್ತು ಸಂದೇಶ
- ಮಾನವ ಹಕ್ಕುಗಳ ಉಲ್ಲಂಘನೆಯ ನಿರ್ದಿಷ್ಟ ಪ್ರಕರಣಗಳು

**ಮಾಡ್ಯೂಲ್ 3 - ವಕಾಲತ್ತು, ಸಂವಹನ ಮತ್ತು ಸಂದೇಶ**

ದಿನಾಂಕ: 28, 29, 30 ಜುಲೈ 2017

- ಉದ್ದೇಶಗಳು: ರಾಜಕೀಯ ನಾಯಕತ್ವಕ್ಕಾಗಿ ಪ್ರಮುಖ ಸಂವಹನ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು
- ಅವಧಿಗಳು:
    - ಎ. ಸಾರ್ವಜನಿಕ ಭಾಷಣ

ವಿಷಯಗಳು:

- ಸಾರ್ವಜನಿಕವಾಗಿ ಮಾತನಾಡುವ ತಂತ್ರಗಳು
- ದೇಹ ಭಾಷೆ ಮತ್ತು ಗೋಚರತೆ
- ಚರ್ಚಾ ತಂತ್ರಗಳು
- ಪತ್ರಿಕಾ ಸಂದರ್ಶನಗಳು

- ಬಿ. ಸಾಮಾಜಿಕ ಕೌಶಲ್ಯಗಳು

ವಿಷಯಗಳು:

- ಸಂಘರ್ಷ ನಿರ್ವಹಣೆ
- ಸಭೆ ನಡೆಸುವ ಕೌಶಲ್ಯಗಳು
- ಇತರ ಗುಂಪುಗಳೊಂದಿಗೆ ಒಕ್ಕೂಟಗಳನ್ನು ನಿರ್ಮಿಸುವುದು

**ಮಾಡ್ಯೂಲ್ 4 - ಚುನಾವಣೆಯ ಕಾರ್ಯತಂತ್ರಗಳು**

ದಿನಾಂಕ: 18, 19, 20 **ಸೆಪ್ಟೆಂಬರ್** 2017

- ಉದ್ದೇಶ: ಯಶಸ್ವೀ ಚುನಾವಣಾ ಪ್ರಚಾರವನ್ನು ಕೈಗೊಳ್ಳಲು ಅವಶ್ಯಕ ಇರುವ ಸಾಮಾಗ್ರಿಗಳನ್ನು ಮತ್ತು ಕೌಶಲ್ಯಗಳನ್ನು ಒದಗಿಸುವುದು
- ಅವಧಿಗಳು

ವಿಷಯಗಳು:

- ಪ್ರಚಾರ ಯೋಜನೆಯನ್ನು ತಯಾರಿಸುವುದು ಮತ್ತು ನಿರ್ವಹಿಸುವುದು
- ಪ್ರಚಾರ ಸಂದೇಶವನ್ನು ಕಟ್ಟುವುದು
- ಮತದಾರರನ್ನು ಸಂಪರ್ಕಿಸುವ ತಂತ್ರಗಳು
- ಪ್ರಚಾರಕ್ಕೆ ಹಣಕಾಸು
- ಸಾರ್ವಜನಿಕ ಪ್ರತಿಷ್ಠೆ
- ಪ್ರಚಾರ ಸಿಬ್ಬಂದಿ ಮತ್ತು ಸ್ವಯಂ ಸೇವಕರು
- ಮೈತ್ರಿಗಳ ನಿರ್ಮಾಣ